**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ವಿರಾಜಪೇಟೆ**

**ಸಿ.ಸಿ. ಸಂಖ್ಯೆ : 690/2017**

**ನ್ಯಾಯಾಲಯದ ಸಾಕ್ಷಿ ಸಿಡಬ್ಲ್ಯೂ- 1**

Proclamation published police

| | | |
|---|---|---|
| ಸಾಕ್ಷಿದಾರರ ಹೆಸರು | : | ಎಂ ಎಂ ಮೊಹಮದ್ |
| ತಂದೆಯ ಹೆಸರು | : | ಲೇಟ್ ಎಂ ಎಂ ಮೂಸಾ |
| ವಯಸ್ಸು | : | 59 ವರ್ಷ |
| ವೃತ್ತಿ | : | ಎ ಎಸ್ ಐ, ವಿರಾಜಪೇಟೆ ನಗರ ಪೊಲೀಸ್ ಠಾಣೆ |
| ವಾಸಸ್ಥಳ | : | ವಿರಾಜಪೇಟೆ ನಗರ |

**ದಿನಾಂಕ ಃ 22-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಮುಖ್ಯ ವಿಚಾರಣೆ**

1. ನಾನು ಡಿಸೆಂಬರ್ 2021 ರಿಂದ ಇಲ್ಲಿಯವರೆಗೂ ವಿರಾಜಪೇಟೆ ನಗರ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 27-07-2023 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ, ಉದ್ಘೋಷಣ ಪ್ರತಿಯನ್ನು ಹೊಂದಿಕೊಂಡು ಕೇರಳ ರಾಜ್ಯದ ಎರ್ನಾಕುಲಂ ಜಿಲ್ಲೆಯ ಆರೋಪಿಯ ವಿಳಾಸಕ್ಕೆ ಹೋಗಿ ಅಲ್ಲಿ ಇರುವಿಕೆ ಬಗ್ಗೆ ಅಲ್ಲಿ ಜನರನ್ನು ವಿಚಾರಿಸಿದಾಗ, ಯಾವುದೇ ಮಾಹಿತಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಕೇರಳ ರಾಜ್ಯದ ಎರ್ನಾಕುಲಂ ಜಿಲ್ಲೆಯ ತಿರುಮರಡಿ ಪಂಚಾಯಿತಿಗೆ ತೆರಳಿ, ಅಲ್ಲಿ ಪಂಚಾಯಿತಿ ಕಛೇರಿಯ ಆವರಣಕ್ಕೆ ಪಂಚರಾದ ಕೆ ಮೊಯ್ದಿನ್ ಕುಟ್ಟಿ ಹಾಗೂ ಬಿ ಶಶಿಧರನ್ ರವರನ್ನು ಬರಮಾಡಿಕೊಂಡು, ಅವರಿಗೆ ಉದ್ಘೋಷಣೆಯ ಬಗ್ಗೆ ಮಾಹಿತಿಯನ್ನು ನೀಡಿ, ಸದರಿಯವರ ಸಮಕ್ಷಮ ಉದ್ಘೋಷಣ ಪ್ರಕಟಣಾ ಮಹಜರ ಕ್ರಮ ಜರುಗಿಸಿ, ಆರೋಪಿಯ ಬಗ್ಗೆ ತಿಳಿದು ಬಂದಲ್ಲಿ ನಮ್ಮ ಪೋಲಿಸ್ ಠಾಣೆಗೆ ತಿಳಿಸುವಂತೆ

ಸೂಚಿಸಲಾಯಿತು. ನಂತರ ಕೇರಳ ರಾಜ್ಯದ ಎರ್ನಾಕುಲಂ ಜಿಲ್ಲೆಯ ತಿರುಮರಡಿ ಕಛೇರಿಯ ನೋಟಿಸ್ ಬೋರ್ಡ್‌ಗೆ ಉದ್ಘೋಷಣ ಪ್ರತಿಯನ್ನು ಅಂಟಿಸಲಾಯಿತು. ಸದರಿ ಸ್ಥಳದಲ್ಲಿ ಸಂಜೆ 4.00 ರಿಂದ 4.45 ಗಂಟೆಯವರೆಗೆ ಮಹಜರ ಕ್ರಮವನ್ನು ಜರುಗಿಸಲಾಯಿತು.

3. ನಂತರ ಠಾಣೆಗೆ ಹಿಂತಿರುಗಿ ನಮ್ಮ ಪಿಎಸ್ಐ ರವರಿಗೆ ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದನ್ನು ನಿಪಿ1 ಎಂದು ಗುರುತಿಸಲಾಯಿತು. ಸಾಕ್ಷಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಕೇರಳ ರಾಜ್ಯದ ಎರ್ನಾಕುಲಂ ಜಿಲ್ಲೆಯ ತಿರುಮರಡಿ, ವಿಲೇಜ್ ಆಫೀಸರ್ ರವರು ನೀಡಿರುವ ದೃಢೀಕರಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದನ್ನು ನಿಪಿ2 ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ ಮುಕ್ತಾಯ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಪ್ರದೀಪ ಪೋತದಾರ )
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.